# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ | 349 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 03.02.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವದಿ: ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರಕ್ಕೆ ಆಸ್ಪದವಾಗುವಂತೆ ಸರ್ಕಾರದ ನೀತಿ ಹಾಗೂ ಸುತ್ತೋಲೆಗಳ ವಿರುದ್ಧವಾಗಿ ನಿವೃತ್ತಿಗೊಂಡ ಅಧಿಕಾರಿಗಳನ್ನು ಪುನರ್ನೇಮ ಕ ಮಾಡಿಕೊಂಡಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 392 ಹುದ್ದೆಗಳು ಮಂಜೂರಾಗಿದ್ದು, 66 ಹುದ್ದೆಗಳು ಮಾತ್ರ ಭರ್ತಿಯಾಗಿರುತ್ತದೆ. ಅಧಿಕಾರಿ /ಸಿಬ್ಬಂದಿಗಳ ಕೊರತೆ ಇದ್ದು, ನಿಗಮದ ಯೋಜನೆಗಳ ವಾರ್ಷಿಕ ಲೆಕ್ಕಪತ್ರ ನಿರ್ವಹಣೆ, ಸಾಲ ವಸೂಲಾತಿ, ಗಂಗಾಕಲ್ಯಾಣ ಯೋಜನೆ, ವಾರ್ಷಿಕ ಲೆಕ್ಕಪರಿಶೋಧನೆಗೆ ಅವಶ್ಯ ಮಾಹಿತಿ ಒದಗಿಸಲು ಹಾಗೂ ಸರ್ಕಾರಕ್ಕೆ ವಿವಿಧ ಹಂತದ ಸಭೆಗೆ ಅಗತ್ಯ ಮಾಹಿತಿ ಒದಗಿಸಲು, ಹಾಗೂ ವಿವಿಧ ಸಮುದಾಯಗಳ ಅಭಿವೃದ್ಧಿ ನಿಗಮಗಳ ಸ್ಥಾಪನೆ ಕಾರ್ಯ ಮತ್ತು ಈ ನಿಗಮಗಳ ಯೋಜನೆಗಳನ್ನು ರೂಪಿಸುವಿಕೆ ಮತ್ತು ಅನುಷ್ಠಾನಕ್ಕೆ ನಿಗಮಕ್ಕೆ ನುರಿತ ಹಿರಿಯ ಅಧಿಕಾರಿಗಳ ಅವಶ್ಯಕತೆ ಇದ್ದಕಾರಣ ನಿಗಮದ ನಿರ್ದೇಶಕ ಮಂಡಳಿಯ ಅನುಮೋದನೆ ಪಡೆದು ತಾತ್ಕಾಲಿಕವಾಗಿ ನಿವೃತ್ತ ಅಧಿಕಾರಿ/ನೌಕರರನ್ನು ನೇಮಕ ಮಾಡಿಕೊಂಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ನಿವೃತ್ತಿ ಅಧಿಕಾರಿಗಳನ್ನು ವಜಾಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗ ವಜಾಗೊಳಿಸಲಾಗಿದೆ; (ಮಾಹಿತಿನೀಡುವುದು) | ಇಲ್ಲ.<br><br>ನಿಗಮಕ್ಕೆ ಕೂಡಲೇ ಖಾಯಂ ಅಧಿಕಾರಿ/ನೌಕರರುಗಳನ್ನು ನೇಮಕ ಮಾಡಿಕೊಂಡು ಅಥವಾ ನಿಯೋಜನೆ ಮೇಲೆ ತೆಗೆದುಕೊಂಡ ನಂತರ ಸದರಿ ನಿವೃತ್ತ ಅಧಿಕಾರಿ/ನೌಕರರನ್ನು ಕರ್ತವ್ಯದಿಂದ ತೆಗೆದು ಹಾಕಲು ಕ್ರಮವಹಿಸಲಾಗುವುದು. |
| ಇ) | ಪುನರ್ನೇಮಕಕ್ಕೆ ಕಾರಣೀ ಭೂತರಾದ ಅಧಿಕಾರಿಗಳ ವಿರುದ್ಧ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; (ಮಾಹಿತಿನೀಡುವುದು) | ಅನ್ವಯಿಸುವುದಿಲ್ಲ. |

| | | |
|---|---|---|
| ಈ) | ಇಂತಹವರ ವಿರುದ್ಧ ಎಷ್ಟು ದಿನಗಳಲ್ಲಿ ಹಾಗೂ ಯಾವರೀತಿ ಕ್ರಮಕೈಗೊಳ್ಳಲಾಗುತ್ತದೆ? (ಸಂಪೂರ್ಣ ವಿವರ ನೀಡುವುದು) | ಅನ್ವಯಿಸುವುದಿಲ್ಲ. |

**ಸಂಖ್ಯೆ:**ಹಿಂವಕ 25 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು